# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**ಪ್ರವೇಶಾತಿ ವಿಭಾಗ**

---

**ಕಚೇರಿ ಆದೇಶ:**

ವಿಷಯ: Council of Boards of School Education (COBSE) ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟಿರುವ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳನ್ನು ಕರಾಮುವಿಯ ಯುಜಿ ಶಿಕ್ಷಣಕ್ರಮಗಳ ಪ್ರವೇಶಾತಿಗೆ ಪರಿಗಣಿಸುವ ಕುರಿತು:

ಉಲ್ಲೇಖ:1. ದಿನಾಂಕ:31.07.2024ರ ಸಮೀಕರಣ ಸಮಿತಿ ಸಭೆಯ ತೀರ್ಮಾನ (ವಿ.ಸಂ:ಇಸಿ 03/2024)

2. ದಿನಾಂಕ:16.08.2024ರ ಶೈಕ್ಷಣಿಕ ಮಂಡಳಿಯ 33ನೇ ವಿಶೇಷ ಸಭೆಯ ತೀರ್ಮಾನ (ವಿ.ಸಂ: 33.06)
3. ದಿನಾಂಕ:17.08.2024ರ ವ್ಯವಸ್ಥಾಪನಾ ಮಂಡಳಿಯ 179ನೇ ಸಭೆಯ ತೀರ್ಮಾನ (ವಿ.ಸಂ: 179.12 )
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.09.2024

*****

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯ ಡೆಬ್ ಅನುಮೋದನೆಯೊಂದಿಗೆ ನಡೆಸುವ ಸ್ನಾತಕ ಪೂರ್ವ ಶಿಕ್ಷಣಕ್ರಮಗಳಿಗೆ ಕರ್ನಾಟಕ ಸರ್ಕಾರದ ಪಿಯುಸಿ ಅಥವಾ ತತ್ಸಮಾನ ವಿಷಯಗಳಲ್ಲಿ 10+2 ತರಗತಿಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳನ್ನು ವಿವಿಯ ನಿಯಮಾನುಸಾರ ಪ್ರವೇಶಾತಿಗೆ ಪರಿಗಣಿಸಲಾಗುತ್ತಿದೆ. ಈ ಸಂಬಂಧದಲ್ಲಿ ವಿವಿಧ ರಾಜ್ಯಗಳಲ್ಲಿನ ಮಾನ್ಯತೆ ಹೊಂದಿರುವ ಅಧಿಕೃತ ಬೋರ್ಡ್‌ಗಳ ಮೂಲಕ 10+2 ಆಧಾರಿತ ಶಿಕ್ಷಣಕ್ರಮಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ವಿವಿಧ ಶಿಕ್ಷಣಕ್ರಮಗಳ ಪ್ರವೇಶಾತಿಗೆ ಬಯಸುತ್ತಿದ್ದಾರೆ.

ವಿವಿಧ ರಾಜ್ಯಗಳಲ್ಲಿನ ಶೈಕ್ಷಣಿಕ ಸಂಸ್ಥೆಗಳು / ಬೋರ್ಡ್‌ಗಳ ಪಟ್ಟಿಯನ್ನೊಳಗೊಂಡ ವಿವರಗಳನ್ನು Council of Boards of School Education (COBSE) ಎಂಬ ಸಂಸ್ಥೆಯು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ತನ್ನ ಧ್ಯೇಯೋದ್ದೇಶಗಳೊಂದಿಗೆ ಪಟ್ಟಿಯನ್ನು ಪ್ರಕಟಿಸಿರುತ್ತದೆ.

ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯು 2023-24ನೇ ಸಾಲಿಗೆ ಪ್ರಕಟಿಸಿರುವ ತನ್ನ ಮಾರ್ಗಸೂಚಿಯಲ್ಲಿ ಈ COBSE ಸಂಸ್ಥೆಯನ್ನು ಉಲ್ಲೇಖಿಸಿ ಪಿಯುಸಿ ದಾಖಲಾತಿಗೆ ರಾಜ್ಯದ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ COBSE ಪಟ್ಟಿಯಲ್ಲಿರುವ ಬೋರ್ಡ್‌ಗಳಲ್ಲಿ ಉತ್ತೀರ್ಣರಾಗಿರುವವರು ಅರ್ಹರಿರುತ್ತಾರೆಂದು ತಿಳಿಸಿರುತ್ತದೆ.

ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣಕ್ರಮಗಳ ಪ್ರವೇಶಾತಿ ಬಯಸಿ ಸಲ್ಲಿಸಲ್ಪಡುವ ವಿವಿಧ ವಿವಿನಿಲಯಗಳು/ಶೈಕ್ಷಣಿಕ ಸಂಸ್ಥೆಗಳು / ಬೋರ್ಡ್‌ಗಳಲ್ಲಿನ ಶಿಕ್ಷಣಕ್ರಮಗಳ ಶೈಕ್ಷಣಿಕ ದಾಖಲಾತಿಗಳನ್ನು ಈ

ವಿವಿ ನಿಲಯವು ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಗೆ ಸಮಾನಾಂತರವಾಗಿದಿಯೇ ಎಂಬುದರ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ವಿವಿಯಿಂದ ರಚಿಸಲ್ಪಟ್ಟಿರುವ ಖಾಯಂ ಸಮೀಕರಣ ಸಮಿತಿ (Equivalence Committee)ಯು ದಿನಾಂಕ:31.07.2024ರ ತನ್ನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ – COBSE ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟು ಅದರ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿರುವ ವಿವಿಧ ರಾಜ್ಯಗಳಲ್ಲಿನ ಶೈಕ್ಷಣಿಕ ಸಂಸ್ಥೆ/ಬೋರ್ಡ್‌ಗಳಿಂದ 12ನೇ ತರಗತಿಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳನ್ನು ಕರಾಮುವಿಯಲ್ಲಿನ ವಿವಿಧ ಯುಜಿ ಶಿಕ್ಷಣಕ್ರಮಗಳಿಗೆ ಅರ್ಹತೆಯನ್ನಾಧರಿಸಿ ಪ್ರವೇಶಾತಿಗೆ ಪರಿಗಣಿಸಲು ತೀರ್ಮಾನವಾಗಿರುತ್ತದೆ.

ಸದರಿ ತೀರ್ಮಾನವನ್ನು ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರಗಳಾದ ಶೈಕ್ಷಣಿಕ ಮಂಡಳಿಯು ತನ್ನ 33ನೇ ವಿಶೇಷ ಸಭೆಯಲ್ಲಿ ಹಾಗೂ ವ್ಯವಸ್ಥಾಪನಾ ಮಂಡಳಿಯ 179 ಸಭೆಯಲ್ಲಿ ಅನುಮೋದನೆ ನೀಡಿರುತ್ತವೆ.

ಶಾಸನಬದ್ಧ ಪ್ರಾಧಿಕಾರಗಳ ತೀರ್ಮಾನವನ್ನು ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶವನ್ನು ಹೊರಡಿಸಿದೆ.

**ಆದೇಶ ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 92 ಬಿ / ಇಸಿ/ 2024-25 ದಿನಾಂಕ: 21.09.2024**

ಮೇಲಿನ ಪ್ರಸ್ತಾವನೆಗೊಳಪಟ್ಟು, ಶಾಸನಬದ್ಧ ಪ್ರಾಧಿಕಾರಗಳ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಯುಜಿ ಶಿಕ್ಷಣಕ್ರಮಗಳ ಪ್ರವೇಶಾತಿಗೆ ಆಯಾ ಶಿಕ್ಷಣಕ್ರಮಗಳ ಪ್ರವೇಶಾತಿ ವಿವರಣಾ ಪುಸ್ತಕದಲ್ಲಿ ತಿಳಿಸುವ ಶೈಕ್ಷಣಿಕ ವಿದ್ಯಾರ್ಹತೆಗಳ ಜೊತೆಗೆ Council of Boards of School Education (COBSE) ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟು ಅದರ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿರುವ ವಿವಿಧ ರಾಜ್ಯಗಳಲ್ಲಿನ ಶೈಕ್ಷಣಿಕ ಸಂಸ್ಥೆ/ಬೋರ್ಡ್‌ಗಳಿಂದ 12ನೇ ತರಗತಿಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳನ್ನು ಕರಾಮುವಿಯಲ್ಲಿನ ವಿವಿಧ ಯುಜಿ ಶಿಕ್ಷಣಕ್ರಮಗಳಿಗೆ ಅರ್ಹತೆಯನ್ನಾಧರಿಸಿ ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಿದೆ.

**ಆದೇಶದ ಮೇರೆಗೆ**

**ಕುಲಸಚಿವ**

1. ಉಪಕುಲಸಚಿವರು, ಪ್ರವೇಶಾತಿ, ಕರಾಮುವಿ, ಮೈಸೂರು.
2. ಪ್ರಾದೇಶಿಕ ನಿರ್ದೇಶಕರು, ಕರಾಮುವಿಯ ಎಲ್ಲಾ ಪ್ರಾದೇಶಿಕ ಕೇಂದ್ರಗಳು – ಮೇಲ್ ಮೂಲಕ
3. ಸಂಯೋಜನಾಧಿಕಾರಿಗಳು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳು – ಈ ಕುರಿತು ಮಾಹಿತಿ ಕೋರಿ ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು – ಮೇಲ್ ಮೂಲಕ
4. ಇನ್‌ಹಾಕ್ ಐಟಿ ಸಲ್ಯೂಷನ್ಸ್, ಬೆಂಗಳೂರು – ಆನ್‌ಲೈನ್ ಪ್ರವೇಶಾತಿ ತಂತ್ರಾಂಶದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸುವುದು.

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.

2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ – – ಮೇಲ್ ಮೂಲಕ
4. ಎಲ್ಲಾ ನಿರ್ದೇಶಕರುಗಳು / ವಿಶೇಷಾಧಿಕಾರಿಗಳು / ಸಂಯೋಜನಾಧಿಕಾರಿಗಳು/ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು – ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
5. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು, ವಿವಿಯ ವಿವಿಧ ವಿಭಾಗಗಳು. – ಮೇಲ್ ಮೂಲಕ.
6. ಸಂಯೋಜನಾಧಿಕಾರಿಗಳು, ವಿದ್ಯಾರ್ಥಿ ವೇತನ ಘಟಕ, ಕರಾಮುವಿ – – ಮೇಲ್ ಮೂಲಕ
7. ಡಾ:ಸಿ.ಜಿ.ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ – ಇವರಿಗೆ ಸದರಿ ಅಧಿಸೂಚನೆಯನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವುದು.
8. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
9. ಎಲ್ಲಾ ಅಧೀಕ್ಷಕರು / ಕಾರ್ಯನಿರ್ವಾಹಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
10. ವಿವಿ ನಿಲಯದ ಮಾಹಿತಿ ಮತ್ತು ಮಾರ್ಗದರ್ಶಕ ಘಟಕ, ಪ್ರವೇಶಾತಿ ವಿಭಾಗ, ಕರಾಮುವಿ.
11. ಕಚೇರಿ ಪ್ರತಿ.